ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ,

ತಿ. ನರಸೀಪುರ.

**ಸಿ ಸಿ ಸಂಖ್ಯೆ: 15/2024**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ತಿ.ನರಸೀಪುರ ಆದ ನಾನು

1. ಸಿದ್ದರಾಜು ಬಿನ್ ಪುಟ್ಟಶೆಟ್ಟಿ
   23 ವರ್ಷ.

2. ಮಂಗಳಮ್ಮ ಕೋಂ ಪುಟ್ಟಶೆಟ್ಟಿ
   46 ವರ್ಷ.

3. ಪುಟ್ಟಶೆಟ್ಟಿ ಬಿನ್ ಲೇ ಕುಳ್ಳಶೆಟ್ಟಿ
   57 ವರ್ಷ.
   1 ರಿಂದ 3ನೇ ಆರೋಪಿತರ ವಾಸಃ ಕಿರಗಸೂರು ಗ್ರಾಮ
   ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.

4. ಶ್ರೀಮತಿ ಸುಮಾ ಕೋಂ ಮಂಜುನಾಥ
   31 ವರ್ಷ, ವಾಸಃ ಕೃಷ್ಣಪುರ ಗ್ರಾಮ, ದೊಡ್ಡೇಬಾಗಿಲು
   ಅಂಚೆ, ಸೋಸಲೆ ಹೋಬಳಿ, ತಿ ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪವೇನೆಂದರೆ :-

ಮೊದಲನೆಯದಾಗಿ, ಮೈಸೂರು ಜಿಲ್ಲಾ ಮಹಿಳಾ ಪೊಲೀಸ್ ಠಾಣಾ ವ್ಯಾಪ್ತಿಯ, ತಿ. ನರಸೀಪುರ ತಾಲ್ಲೂಕಿನ ಯಡದೊರೆ ಗ್ರಾಮದ ನಿವಾಸಿಯಾದ1ನೇ ಆರೋಪಿತರಾದ ನೀವು, ಚಾಸಾ-1/ಸುಮತಿ ರವರನ್ನು ದಿಃ 10.11.2021 ರಂದು ಮದುವೆಯಾಗಿದ್ದು, ಮದುವೆ ಸಮಯದಲ್ಲಿ ಆರೋಪಿತರಾದ ನೀವು ಚಾಸಾ-1ರವರ ಮನೆಯಿಂದ 50 ಗ್ರಾಂ ಚಿನ್ನ ಒಡವೆ, ಬಟ್ಟೆ ಬರೆಗಳು, ವಾಚನ್ನು ಮತ್ತು ದಿನಾಂಕ 06.06.2022 ರಂದು ರೂ. 50,000/- ಹಣವನ್ನು ವರದಕ್ಷಿಣೆಯಾಗಿ ಪಡೆದಿದ್ದು ಆ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 3 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೆಯದಾಗಿ, ವಿವಾಹವಾದ ಸ್ವಲ್ಪ ದಿನಗಳ ನಂತರ ಆರೋಪಿತರಾದ ನೀವು ಚಾಸಾ-1ರವರನ್ನು ಉದ್ದೇಶಿಸಿ "ನೀನು ಸರಿಯಾಗಿ ವರದಕ್ಷಿಣೆ ಹಣ ತಂದಿಲ್ಲ, ಇನ್ನು ಹೆಚ್ಚಿನ ವರದಕ್ಷಿಣೆ ಅಂದರೆ ರೂ. 10 ಲಕ್ಷ ಹಣವನ್ನು ನಿನ್ನ ತವರು ಮನೆಯಿಂದ ತರಬೇಕು" ಎಂದು ಆಕೆಗೆ ಒತ್ತಾಯ ಮಾಡುವ ಮೂಲಕ ವರದಕ್ಷಿಣೆ ನಿಷೇಧ ಕಾಯ್ದೆ ಕಲಂ 4 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಆರೋಪಿತರಾದ ನೀವು ಚಾಸಾ-1ರವರು ಹೆಚ್ಚಿನ ವರದಕ್ಷಿಣೆ ಹಣ ತರುವಂತೆ ಆಕೆಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 498-A ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ದಿನಾಂಕಃ 09.01.2025.

ಹಿರಿಯ ವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ತಿ. ನರಸೀಪುರ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್ ಸಿ ರವರ ನ್ಯಾಯಾಲಯ,

ತಿ ನರಸೀಪುರ

**ಸಿ ಸಿ ಸಂಖ್ಯೆ: 15/2024**

1. ಸಿದ್ದರಾಜು ಬಿನ್ ಪುಟ್ಟಶೆಟ್ಟಿ
   23 ವರ್ಷ.
2. ಮಂಗಳಮ್ಮ ಕೋಂ ಪುಟ್ಟಶೆಟ್ಟಿ
   46 ವರ್ಷ.
3. ಪುಟ್ಟಶೆಟ್ಟಿ ಬಿನ್ ಲೇ ಕುಳ್ಳಶೆಟ್ಟಿ
   57 ವರ್ಷ.
   1 ರಿಂದ 3ನೇ ಆರೋಪಿತರ ವಾಸಃ ಕಿರಗಸೂರು ಗ್ರಾಮ
   ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ.
4. ಶ್ರೀಮತಿ ಸುಮಾ ಕೋಂ ಮಂಜುನಾಥ
   31 ವರ್ಷ, ವಾಸಃ ಕೃಷ್ಣಪುರ ಗ್ರಾಮ, ದೊಡ್ಡೇಬಾಗಿಲು
   ಅಂಚೆ, ಸೋಸಲೆ ಹೋಬಳಿ, ತಿ ನರಸೀಪುರ ತಾಲ್ಲೂಕು,
   ಮೈಸೂರು ಜಿಲ್ಲೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ ಹೌದು

ಪ್ರಶ್ನೆಃ ನೀವು ಸದರಿ ದೋಷಾರೋಪವನ್ನು ಒಪ್ಪಿಕೊಳ್ಳುತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ ಇಲ್ಲಾ ವಿಚಾರಣೆಯಾಗಬೇಕು.

(ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 09.01.2025

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಟಿ ನರಸೀಪುರ.